(೮) ಕೆ. ಆರ್. ನಗರದ ಡಾ. ಮೋಹನ್ ದಾಸ್ ಭಟ್ಟ ಅವರ ಮನೆಯ ಮೇಲೆ ಪುಂಡರಿಂದ ಧಾಳಿ.

೧-೩೦ ಪಿ. ಎಂ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಮೈಸೂರು ಜಿಲ್ಲೆ ಕೆ. ಆರ್. ನಗರದಲ್ಲಿ ದಿನಾಂಕ ೬ನೇ ಆಗಸ್ಟ್ ೮೬ ರಂದು ಸ್ಥಳೀಯ ಡಾ. ಮೋಹನ್ ದಾಸ್ ಭಟ್ಟ ಅವರ ಮನೆಗೆ ಕೆಲವು ಗೂಂಡಾಗಳು ನುಗ್ಗಿ ಅನಿರೀಕ್ಷಿತ ಧಾಳಿ ನಡೆಸಿದ್ದಾರೆ. ಅವರ ರಕ್ಷಣೆಗೆ ಬಂದ ನಾಗರೀಕರ ಮೇಲೆ ಪೋಲೀಸಿನವರೂ ಲಾಠಿ ಚಾರ್ಜ್ ಮಾಡಿದ್ದು, ಈ ಘಟನೆಗಳಿಗೆ ಕಾರಣ ಊರಿನ ಮುಖಂಡರು ಆಗಾಗ್ಗೆ ರಸ್ತೆಯಲ್ಲಿ ಓಡಾಡುವ ಮರ್ಯಾದಸ್ಥ ಹೆಣ್ಣು ಮಕ್ಕಳ ಮೇಲೆ ಕೆಲವು ಪುಂಡರು ದಿನನಿತ್ಯ ಅಸಭ್ಯರೀತಿಯಿಂದ ವರ್ತಿಸುತ್ತಿರುವ ಬಗ್ಗೆ ಕಂಪ್ಲೇಂಟ್ ಕೊಟ್ಟರೂ ಕೂಡ ಪೋಲೀಸಿನವರು ಕ್ರಮ ಕೈಗೊಳ್ಳದಿದ್ದ ಕಾರಣ ಊರಿನ ಬಂದ್ ಕರೆದ ನಂತರ ಈ ಘಟನೆಗಳು ನಡೆದಿದ್ದು, ಉದ್ದೇಶಪೂರ್ವಕವಾಗಿ ಡಾ. ಮೋಹನ್‌ದಾಸ್ ಭಟ್ಟ ಮನೆಯ ಮೇಲೆ ಪುಂಡರಿಂದ ಧಾಳಿ ನಡೆದಿದ್ದು, ಪೋಲೀಸ್ ಲಾಠಿ ಚಾರ್ಜ್‌ನಲ್ಲಿ ಸ್ಥಳೀಯ ಬಿ.ಜೆ.ಪಿ. ಮುಖಂಡರೂ, ವಕೀಲರೂ ಆದ ಶ್ರೀ ತೋಟದಾರ್ಯ ಅವರ ಕೈ ಮೂಳೆ ಮುರಿದಿದೆ ನಂತರ ಬಿ.ಜೆ.ಪಿ. ಮತ್ತು ಜನತಾ ಪಕ್ಷದ ಮುಖಂಡರನ್ನು ಪೋಲೀಸರು ಅರೆಸ್ಟ್ ಮಾಡಿರುವುದರ ಬಗ್ಗೆ ಸರ್ಕಾರದ ಹೇಳಿಕೆಯನ್ನು ತಿಳಿಯ ಬಯಸುತ್ತೇನೆ.

ಶ್ರೀ ಬಿ ರಾಚಯ್ಯ (ಗೃಹ ಸಚಿವರು) —ಮೈಸೂರು ಜಿಲ್ಲೆ ಕೃಷ್ಣರಾಜ ನಗರದಲ್ಲಿ ಆಗಸ್ಟ್ ೧೫ ರಂದು "ಸ್ವಾತಂತ್ರ್ಯ ದಿನಾಚರಣೆ" ಆಚರಣೆ ಅಂಗವಾಗಿ ನಡೆಸಿದ ಸಭಾರಂಭವು ಮುಗಿಯುತ್ತಾ ಬಂದಿದ್ದ. ಆ ಸಂದರ್ಭದಲ್ಲಿ ಕೆಲವು ಮುಸ್ಲಿಮ್ ಹುಡುಗರು, ಮಿನಾಕ್ಷಿ (೧೭) ಎಂಬ ಯುವತಿಯನ್ನು ಕೆಣಕಿದರೆಂಬ ಆಪಾದನೆಯ ಮೇಲೆ ಲಿಂಗರಾಜು ಎಂಬ ಯುವಕನು ಮುಸ್ಲಿಮ್ ಹುಡುಗರ ಮೇಲೆ ಕಲ್ಲು ತೆಗೆದು ಮುಸ್ಲಿಮ್ ಹುಡುಗರು ಲಿಂಗರಾಜುವಿಗೆ ಕೈಯಿಂದ ಹೊಡೆದು ಗಾಯಗೊಳಿಸಿದರು. ಈ ಘಟನೆಯ ಬಗ್ಗೆ ಯಾರೂ ಫಿರ್ಯಾದಿ ಕೊಡಲಿಲ್ಲ ದಿನಾಂಕ ಆಗಸ್ಟ್ ೧೬ ರಂದು ಅಂದಾಜು ೭ ಗಂಟೆ ಸಮಯದಲ್ಲಿ ಕೆ. ಎಸ್. ಆರ್. ಟಿ. ಸಿ. ಚಾಲಕ ನಿಸ್ಸಾರ್ ಅಹಮದ್‌ನು ಊರಿಗೆ ಹೋಗುವ ಸಲುವಾಗಿ ಬಸ್ಸು ನಿಲ್ದಾಣದಲ್ಲಿ ಇದ್ದಾಗ, ಲಿಂಗರಾಜು ಮತ್ತು ೧೫ ಜನ ಹಿಂದು ಯುವಕರು ದಿನಾಂಕ ಆಗಸ್ಟ್ ೧೫ ರಂದು ಲಿಂಗರಾಜುವಿಗೆ ಗಾಯಗೊಳಿಸಿದವರ ಪೈಕಿ ಒಬ್ಬನಾಗಿದ್ದಾನೆಂದು ಅವನ ಮೇಲೆ ಹಲ್ಲೆ ನಡೆಸಿ ಗಾಯಗೊಳಿಸಿದರೆಂದು ವರದಿಯಾಗಿದೆ. ನಿಸ್ಸಾರ್ ಅಹಮದ್ ಕೊಟ್ಟ ಫಿರ್ಯಾದಿ ಪ್ರಕಾರ ಕೆ.ಆರ್. ಪೋಲೀಸ್ ಠಾಣೆಯಲ್ಲಿ ಮೊಕದ್ದಮೆ ನಂಬ್ರ ೧೩೧ / ೮೬ ಕಲಂ ೧೫೩, ೧೫೭, ೨೨೩ ಮತ್ತು ೧೪೪ ಭಾರತೀಯ ದಂಡ ಸಂಹಿತೆಯ ಪ್ರಕಾರ ದಾಖಲು ಮಾಡಲಾಗಿತ್ತು. ಲಿಂಗರಾಜುವಿನ ಫಿರ್ಯಾದಿ ಪ್ರಕಾರ ಮತ್ತೊಂದು ಮೊಕದ್ದಮೆ ನಂಬ್ರ ೧೩೪ / ೮೬, ಕಲಂ ೧೪೩, ೧೪೭, ೨೨೩ ಮತ್ತು ೧೪೪ ಐ.ಪಿ.ಸಿ. ಪ್ರಕಾರ ದಾಖಲು ಮಾಡಿಕೊಳ್ಳಲಾಯಿತು. ದಿನಾಂಕ ಆಗಸ್ಟ್ ೧೭ ರಂದು ಆಂಜನೇಯ ಬ್ಲಾಕಿನ ಹಿಂದೂಗಳು ಸ್ಥಳೀಯ ವಿಧಾನ ಸಭಾ ಸದಸ್ಯರಾದ ನಂಜಪ್ಪ ಮತ್ತು ತೆಂಗಿನಕಾರ್ಯಯವರ ಅವರ ನೇತೃತ್ವದಲ್ಲಿ ಒಂದು ಸಭೆಯನ್ನು ನಡೆಸಿ, ಹಿಂದು ಯುವತಿಯನ್ನು ಕೆಣಕಿದ ಮತ್ತು ಲಿಂಗರಾಜುವಿಗೆ ಗಾಯಗೊಳಿಸಿದ ಹಿನ್ನೆಲೆಯಲ್ಲಿ ದಿನಾಂಕ ಆಗಸ್ಟ್ ೨೨ ರಂದು ಕೆ. ಆರ್. ನಗರದಲ್ಲಿ 'ಬಂದ್' ಆಚರಿಸಬೇಕೆಂದು ಒತ್ತಾಯಿಸಿದರು. ಹಿರಿಯರು ಮತ್ತು ಮುಖಂಡರು 'ಬಂದ್' ಆಚರಿಸುವ ಸಲುವಾಗಿ ವಿರೋಧ ವ್ಯಕ್ತಪಡಿಸಿದರೂ ಸಹ ಅಲ್ಲಿ ಸೇರಿದ್ದ ಯುವಕರು ಬಂದ್ ಆಚರಿಸಲೇ ಬೇಕೆಂದು ಒತ್ತಾಯಿಸಿದರು. ಆ ಪ್ರಕಾರ ಆಗಸ್ಟ್ ೨೨ ರಂದು 'ಬಂದ್' ಆಚರಿಸಿ, ೪ ಕಿಲೋ ಮೀಟರ್ ಅಂತರದಲ್ಲಿರುವ ಅರೆಕೆರೆಯಲ್ಲಿ ಕೆ ಎಸ್.ಆರ್.ಟಿ.ಸಿ ಬಸ್ಸಿನ ಮೇಲೆ ಕೆಲವು ಹುಡುಗರು ಕಲ್ಲು ತೂರಾಡಿ ನಷ್ಟಗೊಳಿಸಿದ ಘಟನೆ ಬಿಟ್ಟು ಬೇರೆ ಯಾವ ಘಟನೆಗಳು ನಡೆಯಲಿಲ್ಲ.

ದಿನಾಂಕ ಆಗಸ್ಟ್ ೨೩ರ ಸಂಜೆ ಮಾಜಿ ಭಾರತೀಯ ಜನತಾ ಪಕ್ಷದ (ಬಿ. ಜೆ. ಪಿ) ಅಧ್ಯಕ್ಷರವರ ನೇತೃತ್ವದಲ್ಲಿ ಆಂಜನೇಯ ಬ್ಲಾಕ್‌ನಲ್ಲಿ ೫೦-೬೦ ಜನ ಕೂಡಿಕೊಂಡು ಬಂದ್ ಆಚರಿಸಿದ ಬಗ್ಗೆ ಚರ್ಚೆ ನಡೆಸುತ್ತಿರುವಾಗ ಡಾ. ಮೋಹನ್‌ದಾಸ್ ಭಟ್ಟರವರು ಬಂದು ತಮ್ಮ ಮನೆಗೆ ಕಲ್ಲುಗಳು ಬೀಳುತ್ತಿರುವ ಸಂದ್ಧಿಯನ್ನು ತಿಳಿಸಿದರು. ಆಲ್ಲಿ ನೆರೆದಿದ್ದ ಹಿಂದುಗಳು ಗುಂಪುಕಟ್ಟಿ ಕೊಂಡು ಬಸ್ಸು ನಿಲ್ದಾಣದ ಕಡೆಗೆ ಹೋಗಿ ಎಳ ನೀರು ವಾರುವುದಕ್ಕೆ ಗರಿ ಮೇಲ್ಛಾವಣಿಯಲ್ಲಿ ಅಂಗಡಿಗಳಿಗೆ ಬೆಂಕಿ ಹಚ್ಚಿದರು. ಇದು

ಅಲ್ಲದೆ ಮುಸ್ಲಿಮರಿಗೆ ಸೇರಿದ ೩ ತಳ್ಳುವ ಗಾಡಿಗಳಿಗೂ ಬೆಂಕಿ ಹಚ್ಚಿದರು. ಅದೇ ಸಮಯದಲ್ಲಿ ಕೆಲವು ಮುಸ್ಲಿಮರು ಗುಂಪುಕಟ್ಟಿಕೊಂಡು ಬಸ್ಸು ನಿಲ್ದಾಣದ ಹತ್ತಿರ ನಿಲ್ಲಿಸಿದ್ದ ಎರಡು ಸ್ಕೂಟರುಗಳಿಗೆ ಬೆಂಕಿ ಹಚ್ಚಿ, ಒಂದು ಸ್ಕೂಟರನ್ನು ಪೂರ್ಣ ನಾಶಗೊಳಿಸಿದರು. ಇದು ಅಲ್ಲದೆ ಡಾ. ಮೋಹನ್‌ದಾಸ್ ಭಟ್ಟರ ಮನೆಯ ಮುಂಭಾಗಿಲಿಗೆ ಹಾಕಿದ ಕರ್ಟನ್ನಿಗೆ ಬೆಂಕಿ ಹಚ್ಚಿ ಬಾಗಿಲುಗಳಿಗೆ ಜಖಂ ಮಾಡಿದರು, ಮತ್ತು ಮೋಹನ್‌ದಾಸ್ ಭಟ್ಟರಿಗೆ ಹೊಡೆದು ಗಾಯಗೊಳಿಸಿದರು. ಹಿಂದು ಮತ್ತು ಮುಸ್ಲಿಮ್ ಗುಂಪಿನವರಲ್ಲಿ ಘರ್ಷಣೆಯಾಗುವುದನ್ನು ತಪ್ಪಿಸಲು ಪೋಲೀಸರು ಲಘು ಲಾಠಿ ಪ್ರಹಾರ ಮಾಡಿ, ಗುಂಪನ್ನು ಚದುರಿಸಿ. ಕಲಂ ೧೪೪ರ ದಂಡ ಪ್ರಕ್ರಿಯ ಸಂಹಿತೆಯ ಪ್ರಕಾರ ನಿಷೇಧಾಜ್ಞೆಯನ್ನು ಜಾರಿಗೊಳಿಸಿ, ಪೋಲೀಸ್ ಗಸ್ತನ್ನು ಬಿಗಿಪಡಿಸಿದರು. ಈ ಘಟನೆಗಳ ಸಂಬಂಧ ಪೋಲೀಸರು ನಾಲ್ಕು ಮೊಕದ್ದಮೆಗಳನ್ನು ದಾಖಲು ಮಾಡಿಕೊಂಡರು. ೩೦ ಜನ ಹಿಂದುಗಳನ್ನು ಮತ್ತು ೩ ಜನ ಮುಸ್ಲಿಮರನ್ನು ದಸ್ತಗಿರಿ ಮಾಡಿರುತ್ತಾರೆ. ಒಟ್ಟು ೧೨ ಸಾವಿರ ರೂಪಾಯಿಗಳಷ್ಟು ನಷ್ಟ ಉಂಟಾಗಿರುತ್ತದೆ.

ಮಾನ್ಯ ಸದಸ್ಯರು ಕೊಟ್ಟ ಸೂಚನೆ ಪ್ರಕಾರ ಮರ್ಯಾದಸ್ಥ ಹೆಣ್ಣು ಮಕ್ಕಳ ಮೇಲೆ ಕೆಲವು ಪುಂಡರು ದಿನನಿತ್ಯ ಅಸಭ್ಯ ರೀತಿಯಲ್ಲಿ ವರ್ತಿಸುತ್ತಿರುವ ಬಗ್ಗೆ ಕಂಪ್ಲೇಂಟ್ ಕೊಟ್ಟರೂ ಪೋಲೀಸರು ಕ್ರಮ ಕೈಗೊಳ್ಳದ ಕಾರಣ ಬಂದ್ ಕರೆ ನೀಡಿದ್ದು. ನಂತರ ಘಟನೆಗಳು ಉಂಟಾಗಿದೆಯೆಂದು ಹೇಳಿದ್ದಾರೆ. ಆದರೆ ಆ ತರಹದ ಕಂಪ್ಲೆಂಟುಗಳು ಪೊಲೀಸರಿಗೆ ಬಂದಿಲ್ಲ, ಮತ್ತು ಡಾ. ಮೋಹನ್‌ದಾಸ್ ಭಟ್ಟರ ಮನೆಯ ಮೇಲೆ ಉದ್ದೇಶ ಪೂರ್ವಕವಾಗಿ ಈ ಧಾಳಿಯು ನಡೆದಿರುವುದಿಲ್ಲ. ಶ್ರೀ ತೊಂಟದಾರಧ್ಯರವರಿಗೆ ಪೊಲೀಸರು ಲಾಠಿ ಪ್ರಹಾರದಲ್ಲಿ ಕೈಗೆ ಪೆಟ್ಟು ತಗಲಿ ಅವರನ್ನು ಸ್ಥಳೀಯ ವೈದ್ಯರ ಸಲಹೆಯಂತೆ ಮೈಸೂರು ಕೆ. ಆರ್. ಆಸ್ಪತ್ರೆಗೆ ಪರೀಕ್ಷಣೆಗಾಗಿ ಕಳುಹಿಸಿಕೊಟ್ಟಿರುತ್ತಾರೆ, ಮುಂಜಾಗ್ರತೆಯ ಕ್ರಮವಾಗಿ ಪೋಲೀಸರು ಹಿಂದೂ ಹಿತ ರಕ್ಷಣಾ ಸಮಿತಿಯ ಸದಸ್ಯರುಗಳನ್ನು ಮತ್ತು ಬಿ.ಜೆ.ಪಿ. ಮುಖಂಡರು, ಹಾಗೂ ಕೆಲವು ಕಾರ್ಯಕರ್ತರಂಗಳನ್ನು ಮತ್ತು ಜನತಾ ಪಕ್ಷದ ಕಾರ್ಯಕರ್ತರುಗಳನ್ನು ದಿನಾಂಕ ಆಗಸ್ಟ್ ೨೨ ರಂದೂ ದಸ್ತಗಿರಿ ಮಾಡಿ, ಮೂರನೆ ದಿವಸ ಬಿಡುಗಡೆ ಮಾಡಲಾಯಿತು. ಈಗ ಪರಿಸ್ಥಿತಿ ಶಾಂತವಾಗಿದೆ.

೯. ಕೋಲಾರ ನಗರದ ಉಷಾ ಟೆಲಿಹಾಯಿಸ್ಟ್ ಕಂಪನಿಯು ಅಕ್ರಮವಾಗಿ ಲಾಕೌಟ್ ಘೋಷಿಸಿರುವುದೂ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಕೋಲಾರ ನಗರದ ಪಕ್ಕದಲ್ಲಿರುವ ಉಷಾ ಟೆಲಿಹಾಯಿಸ್ಟ್ ಕಂಪನಿಯಲ್ಲಿ ಅಕ್ರಮವಾದ ಲಾಕೌಟ್ ಘೋಷಣೆ ಮಾಡಿ ೧೫ ದಿನಗಳಿಂದ ಸುಮಾರು ೩೦೦ ಜನ ಕಾರ್ಮಿಕರು ಫ್ಯಾಕ್ಟರಿ ಮುಂದೆ ಧರಣಿ ನಡೆಸುತ್ತಿದ್ದಾರೆ. ಮಾನ್ಯ ಮುಖ್ಯ ಮಂತ್ರಿಯವರು ಮತ್ತು ಕಾರ್ಮಿಕ ಮಂತ್ರಿಗಳಿಗೆ ಕೂಡ ಅವರು ಮನವಿ ಕೊಟ್ಟಿದ್ದರೂ ಸಹ ವಿನಾಕಾರಣ ಲಾಕೌಟ್ ಮಾಡಿದ್ದನ್ನು ಪಾಪಸ್ಸು ತೆಗೆದುಕೊಳ್ಳದೆ ಕಾರ್ಮಿಕರ ಹಿತದೃಷ್ಟಿಯಿಂದ ತುಂಬಾ ಅನ್ಯಾಯ ಮಾಡಿರುವುದರಿಂದ ಸರಕಾರ ತುರ್ತಾಗಿ ಲಾಕ್ ಔಟ್ ತೆಗೆಯಿಸಿ ಕಾರ್ಮಿಕರಿಗೆ ಹಿಂದಿನ ವೇತನ ಕೊಡಿಸಿ ಅಕ್ರಮವಾಗಿ ಸಸ್ಪೆಂಡ್ ಮಾಡಿರುವ ಕಾರ್ಮಿಕರ ಸಂಘದ ಪದಾಧಿಕಾರಿಗಳಿಗೆ ಕೆಲಸ ಕೊಡಿಸಿಕೊಟ್ಟು ಕಾರ್ಮಿಕರಿಗೆ ನ್ಯಾಯ ಕೊಡಿಸಬೇಕೆಂದು ಸಂಬಂಧಪಟ್ಟ ಮಂತ್ರಿಯವರನ್ನು ಕೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಕಾರ್ಮಿಕ ಮಂತ್ರಿ).—ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ನಾನು ಕೋಲಾರಕ್ಕೆ ಹೋದಾಗ ಕಾರ್ಮಿಕ ಮುಖಂಡರು ನಮ್ಮನ್ನು ಬಂದು ಕಂಡರು ಆಮೇಲೆ ಮ್ಯಾನೇಜ್‌ಮೆಂಟ್‌ನವರು, ಕಾರ್ಮಿಕ ಮುಖಂಡರು ಹಾಗೂ ಲೇಬರ್ ಅಧಿಕಾರಿಗಳನ್ನು ಕರೆದು ಕೂಡಲೇ ಇದನ್ನು ಇತ್ಯರ್ಥ ಮಾಡಬೇಕೆಂದು ಸೂಚನೆ ಕೊಡಲಾಯಿತು. ನಂತರ ಎರಡು-ಮೂರು ಸಲ ಅವರ ಸಭೆಗಳು ಆಗಿದ್ದರೂ ಸಹ ಯಾವುದೂ ಇತ್ಯರ್ಥ ಆಗಲಿಲ್ಲ. ಇದು ಕೂಡಲೇ ಇತ್ಯರ್ಥ ಆಗಬೇಕೆಂದು ಲೇಬರ್ ಕಮೀಷನರ್ ಅವರು ಹೇಳಿದ್ದಾರೆ. ಲಾಕ್‌ಔಟ್ ತೆಗೆಸಬೇಕಾಗಿದ್ದರೆ ಅವರನ್ನು ಕೆಲವು ಬೇಡಿಕೆಗಳು ಇವೆ. ಈಗ ಸಂಧಾನಗಳು ನಡೆಯುತ್ತಿವೆ ಏನೂ ಆಗದಿದ್ದರೆ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.